Sri M. RAJASEKHARA MURTHY.—This is more or less like promotional activity.

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿರತಕ್ಕ ನಮ್ಮ ಟ್ರೇಡ್ ಏಸಂಟರು ಇಲ್ಲಿನ ಖಾಸಗೀ ಸಂಸ್ಥೆಗಳವರ ಕೆಲಸವನ್ನು ನೋಡಿಕೊಂಡು ಇವರಿಗೂ ಸಹಾಯ ಮಾಡುತ್ತಾರೆಂದು ಹೇಳಲಾಯಿತು. ಆದರೆ ನಮ್ಮ ಸರ್ಕಾರದ ಕೆಲಸ ಬಹಳ ಕಡಮೆ. ಹೊರಗಡೆಯವರ ಕೆಲಸಗಳೇ ಹೆಚ್ಚಾಗಿರುವುದರಿಂದ ಅಲ್ಲಿ ಅಷ್ಟು ದೊಡ್ಡ ಸಿಬ್ಬಂದಿಯನ್ನು ಇಟ್ಟುಕೊಂಡಿರುವುದು ನಮ್ಮ ಸರ್ಕಾರಕ್ಕೆ ದೊಡ್ಡ ನಷ್ಟವಲ್ಲದೇ ?

ಶ್ರೀ ಎಂ. ರಾಜಶೇಖರ ಮೂರ್ತಿ.—ನಾವು ಗಂಧದ ಎಣ್ಣೆಯನ್ನು ಸುಮಾರು ವರ್ಷಕ್ಕೆ ಒಂದು ಕೋಟಿ ಖರ್ಚು ರಫ್ತು ಮಾಡುತ್ತಿದ್ದೇವೆ, ಮತ್ತು ಗಂಧದ ಸಾಬೂನನ್ನು ವರ್ಷಕ್ಕೆ ಮೂರು ನಾಲ್ಕು ಕೋಟಿಗಳವರೆಗೂ ರಫ್ತು ಮಾಡುತ್ತಿದ್ದೇವೆ. ಆದ್ದರಿಂದ ಅಲ್ಲಿ ಆ ಸಿಬ್ಬಂದಿಯ ವೆಚ್ಚಕ್ಕೆ ತಗಲುವ ವೆಚ್ಚ ಅಷ್ಟೇನೂ ಹೆಚ್ಚಲ್ಲ.

Sri J. P. SARWESH.—Will the Government consider abolishing this post, which is the object of much criticism both in Lok Sabha as well as in this State ?

Sri M. RAJASEKHARA MURTHY.—Sir, Government are not considering the abolition of this post.

Schools having their own buildings in Kalghatgi Taluk

131 Sri F. S. PATIL (Kalghatgi).—

Will the Minister for Education be pleased to state :—

(*a*) the number of Kannada Primary School Teachers in Kalghatgi taluk ;

(*b*) the number of boys ;

(*c*) the number of girls ;

(*d*) the number of schools having their own buildings ;

(*e*) the number ef schools which are not having their own buildings ;

(f) the number of incomplete school buildings in the above taluk ?

Sri N. M. KOTRABASIAH SOGI (Deputy Minister for Education).—

(*a*) 218.

(*b*) 6017.

(*c*) 4282.

(*d*) 28.

(*e*) 58.

(*f*) 47.

ಶ್ರೀ ಎಫ್. ಎಸ್. ಪಾಟೀಲ್.—(ಈ)ಗೆ ಉತ್ತರವಾಗಿ 47 ಸ್ಕೂಲು ಕಟ್ಟಡಗಳು ಇನ್ನೂ ಕಂಪ್ಲೀಟ್ ಆಗಿಲ್ಲವೆಂದು ಹೇಳಿದ್ದೀರಿ. ಅವು ಯಾವಾಗ ಕಂಪ್ಲೀಟ್ ಆಗುತ್ತದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಷ್ಟೊಂದು ವಿವರವಾದ ಮಾಹಿತಿ ಕೊಡುವುದಕ್ಕೆ ಕಷ್ಟವಾಗುತ್ತದೆ. ಅವುಗಳು ಜಿಲ್ಲಾ ಸ್ಕೂಲು ಬೋರ್ಡುಗಳ ಆಡಳಿತದಲ್ಲಿದ್ದರೂ ಅವನ್ನು ರದ್ದು ಮಾಡಿ ಸರ್ಕಾರ ವಹಿಸಿಕೊಂಡಿದೆ. ಸರ್ಕಾರಕ್ಕೆ ಬಂದಿರತಕ್ಕ ಶಾಲಾ ಕಟ್ಟಡಗಳು ಅಪೂರ್ಣವಾಗಿದ್ದರೆ, ಅವುಗಳನ್ನು ಜಾಗ್ರತೆಯಾಗಿ ಪೂರ್ಣಗೊಳಿಸುತ್ತೇವೆ.

ಶ್ರೀ ಎಸ್. ಆರ್. ಬೊಮ್ಮೈ.—ಹಳ್ಳಿಯವರು ಕೊಡಬೇಕಾದ ಕಂಟ್ರಿಬ್ಯೂಷನನ್ನು ಕೊಟ್ಟಿದ್ದಾರೆ. ಸರ್ಕಾರದವರು ಕೊಡುವ ಹಣವನ್ನು ಯಾವಾಗ ಕೊಡುತ್ತಾರೆ ? ಅಪೂರ್ಣವಾಗಿರುವ ಶಾಲಾ ಕಟ್ಟಡಗಳನ್ನು ಪೂರ್ಣಗೊಳಿಸುವುದಕ್ಕೆ ಯಾವ ಕ್ರಮಗಳನ್ನು ತಾವು ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸರ್ಕಾರ ಕೊಡಬೇಕಾದ ಹಣವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತಾಲ್ಲೂಕ್ ಬೋರ್ಡ್‌ಗಳ ಮುಖಾಂತರ ಕೊಡುತ್ತಾರೆ. ನಗರ ಪ್ರದೇಶಗಳಲ್ಲಿ ಮುನಿಸಿಪಾಲಿಟಿಗಳ ಮುಖಾಂತರ ಕೊಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಸರ್ಕಾರದವರು ಈ ಶಾಲೆಗಳನ್ನು ತೆಗೆದುಕೊಂಡರೆ, ಪೂರ್ತಿಯಾಗಿ ಅವನ್ನು ಅವರೇ ಕಟ್ಟಿಸುತ್ತಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಒಂದು ಕ್ರಮ ಇದೆ. ತಾಲ್ಲೂಕು ಬೋರ್ಡಿನವರು, ಗ್ರಾಮ ಪಂಚಾಯತಿಯವರು, ಗ್ರಾಮಸ್ಥರು ಹಾಗೂ ಸರ್ಕಾರ ಇವರೆಲ್ಲಾ ಕೂಡಿ ಆ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕಾಗಿದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಗಾಂಧಿ ಶತಾಬ್ದ ವರ್ಷದಲ್ಲಿ ಈ ಶಾಲಾ ಕಟ್ಟಡಗಳನ್ನು ಕಟ್ಟಿ ಮುಗಿಸಬೇಕೆಂಬ ಆದೇಶವಿರುವುದರಿಂದ, ಅವನ್ನು ಜಾಗ್ರತೆಯಾಗಿ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಗಾಂಧಿ ಶತಾಬ್ದಿ ವರ್ಷದೊಳಗೇ ರಾಜ್ಯದ ಎಲ್ಲಾ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಅದು ಕಷ್ಟವಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಹಾಗಾದರೆ ಅರ್ಧಂಬರ್ಧವಾಗಿರುವ ಶಾಲಾ ಕಟ್ಟಡಗಳನ್ನು ಮುಕ್ತಾಯ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದುವರೆಗೆ ಸರ್ಕಾರದವರು ಒಂದೊಂದು ಶಾಲೆಗೆ ಸಾವಿರಾರು ರೂಪಾಯಿಗಳನ್ನು ಕೊಡುತ್ತಿದ್ದರು. ಈಗ ಎರಡು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಗಾಂಧಿ ಶತಾಬ್ದಿ ವರ್ಷದೊಳಗೇ ಈಗಾಗಲೇ ಕೈಗೊಂಡಿರತಕ್ಕ ಅಪೂರ್ಣವಾದ ಶಾಲಾ ಕಟ್ಟಡಗಳನ್ನು ಮುಗಿಸುವ ಉದ್ದೇಶದಿಂದ 20 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈಗಾಗಲೇ ಕೈಗೊಂಡಿರತಕ್ಕ ಕಾರ್ಯಕ್ರಮಗಳನ್ನು ಆ ಅವಧಿಯೊಳಗೆ ಮುಗಿಸಲು ತಕ್ಕ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ.

Sri B. B. SAYANAK.—May I kuow what is the average attendance of boys and girls in this school ?

Sri N. M. KOTRABASAIAH SOGI.—If a separate question is asked I will supply the information.

ಶ್ರೀ ಬಿ. ಪರಮೇಶ್ವರಪ್ಪ.—ಹಳ್ಳಿಗಾಡುಗಳಲ್ಲಿ ಕಟ್ಟತಕ್ಕ ಸ್ಕೂಲುಗಳಿಗೆ ಕಂಟ್ರಿಬ್ಯೂಷನ್ ಕೊಡಬೇಕೆಂದು ಹೇಳಿದ್ದೀರಿ. ಅದೇ ರೀತಿ ಪಟ್ಟಣಗಳಲ್ಲಿ ಕಟ್ಟತಕ್ಕ ಸ್ಕೂಲುಗಳಿಗೂ ಕಂಟ್ರಿಬ್ಯೂಷನ್ ಕೊಡಬೇಕೆಂದು ಮಾಡಿದ್ದೀರೋ ?

ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಇಲ್ಲಿ ಮುನಿಸಿಪಾಲಿಟಿಯವರು ಅದನ್ನು ಮಾಡಬೇಕಾದುದು.

ಶ್ರೀ ಎಸ್. ಆರ್. ಬೊಮ್ಮೈ.—ಸರ್ಕಾರದವರು ತಾಲ್ಲೂಕು ಬೋರ್ಡುಗಳಿಗೆ ಕೊಡಬೇಕಾದ ಹಣವನ್ನು ಇನ್ನೂ ಕೊಟ್ಟಿಲ್ಲ. ಅದನ್ನು ಜಾಗ್ರತೆಯಾಗಿ ಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕೆಲವು ತಾಲ್ಲೂಕು ಬೋರ್ಡಿನವರು ಸರ್ಕಾರಕ್ಕೆ ಪ್ಲಾನು ಸ್ಕೀಮುಗಳನ್ನು ಇನ್ನೂ ಕೊಟ್ಟಿಲ್ಲ. ಗಾಂಧಿ ಶತಮಾನೋತ್ಸವ ಅವಧಿಯೊಳಗೆ ಈ ಕೆಲಸಗಳನ್ನು ಅವಶ್ಯಕವಾಗಿ ಮಾಡಬೇಕಾಗಿದೆ.
It is the obligatory function of the taluk board under the Act. Every taluk board should make it a point to construct the building.

Sri D. B. KALMANKAR.—May I know whether in that taluk any villages are without primary schools and if so how many ?

Sri N. M. KOTRABASAIAH SOGI.—This question must be answered by the Revenue Department. As for as Education Department is concerned, there are schools in almost all the villages.

ಶ್ರೀ ರಾಚಪ್ಪ ಪಾಲಿ.—ಎಷ್ಟೋ ಸ್ಕೂಲುಗಳು ಗುಡಿಗಳಲ್ಲಿ ನಡೆಯುತ್ತಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ನಿವಾರಿಸುವುದಕ್ಕೆ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡಿನವರು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ತಾಲ್ಲೂಕು ಬೋರ್ಡಿನವರಿಗೆ ಅಮ ಅಬ್ಲಿಗೇಟರಿ ಡ್ಯೂಟಿ, ಅದನ್ನು ಮನಗಂಡು ಮಹಾತ್ಮ ಗಾಂಧಿ ಶತಮಾನೋತ್ಸವ ವರ್ಷದಲ್ಲಿ ಒಂದು ವಿಶೇಷವಾದ ಯೋಜನೆಯನ್ನು ಇಟ್ಟುಕೊಂಡು ಮಾಡಿದ್ದಾರೆ. ಈಗ 2 ಸಾವಿರ ರೂಪಾಯಿಗಳನ್ನು ಕೊಡುವುದರಿಂದ ಈ ವರ್ಷ ಹೆಚ್ಚು ಹಣವನ್ನು ಈ ಯೋಜನೆಗೆ ಉಪಯೋಗಿಸಿಕೊಂಡು ಈ ಕಾರ್ಯವನ್ನು ಮುಂದುವರಿಸಬಹುದು.

Supply of Mechanised Fishing Boats

153. Sri B. M. IDINABBA (Mangalore).—

Will the Minister of State for Ports and Fisheries be pleased to state :—

(*a*) the number of mechanised Fishing boats supplied in the State up-to-date ;

(*b*) the increase in the number of these boats by the end of 1969 ;

(*c*) whether Government itself will obtain and supply Foreign Marine Engine to Fishermen ;

(*d*) the number of applications out of the applications received for the sanction of mechanised boats still pending with the Government ;

(*e*) whether it has come to their notice that the boats have been given to non-fishermen other than the actual fishermen ?

Sri H. C. LINGA REDDY (Minister of State for Ports and Fisheries).—

(*a*) 606.

(*b*) 731.

(*c*) As the Central Government have stopped the import of Foreign Marine engines it is not possible to supply such engines to Fishermen now.

(*d*) 50 (Fifty).

(*e*) No.

ಶ್ರೀ ಬಿ. ಎಂ. ಇದಿನಬ್ಬ.—ರಾಜ್ಯದಲ್ಲಿ ಈವರೆಗೆ 606 ಯಾಂತ್ರಚಾಲಿತ ದೋಣಿಗಳನ್ನು ಕೊಡ ರಾಗಿದೆ ಎಂದು ಹೇಳಿದ್ದೀರಿ. ಈ ದೋಣಿಗಳನ್ನು ಯಾರಿಗೆ ಯಾವ ಆಧಾರದಮೇಲೆ ಕೊಡುತ್ತಿದ್ದೀರಿ ? ಈ ದೋಣಿಗಳನ್ನು ಹೆಚ್ಚಾಗಿ ಶ್ರೀಮಂತರಿಗೆ ಕೊಡುತ್ತಿದ್ದಾರೆಂಬುದು ನಿಜವೇ ?